**ಓ ಎಸ್ ನಂ. 266/2023**

**ಪಿಡಬ್ಲ್ಯೂ-2**

**ಸಾಕ್ಷಿಯನ್ನು ದಿನಾಂಕಃ 03-06-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಬಿಡಿಎ ವಕೀಲರಿಂದ.**

1. ಶಲಾಸಾಬ ತಂದೆ ಬಾಡೆಸಾಬನನ್ನು ನಾನು ನೋಡಿರುವುದಿಲ್ಲ. ಸದರಿಯವನು ತೀರಿಕೊಂಡು ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸದರಿಯವನಿಗೆ ಎಷ್ಟು ಜನ ಹೆಂಡತಿ-ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವನಿಗೆ 4-5 ಮನೆಗಳು ಮತ್ತು 18 ಎಕರೆ ಹೊಲ ಇರುತ್ತದೆ. ಸದರಿ ಮನೆಗಳ ಮತ್ತು ಜಮೀನುಗಳು ಪಹಣಿಗಳು ಮೊದಲು ಮತ್ತು ನಂತರ ಯಾರ ಹೆಸರಿನಲ್ಲಿ ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಈವರೆಗೂ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

2. ಮೃತ ರಾಜೇಸಾಬನನ್ನು ನಾನು ನೋಡಿರುತ್ತೇನೆ. ರಾಜೇಸಾಬ ಮರಣ ಹೊಂದಿ 10-12 ವರ್ಷಗಳು ಆಗಿರುತ್ತವೆ. ರಾಜೇಸಾಬ ಇವರು ಜೀವಂತ ಇರುವಾಗ ಪ್ರತಿವಾದಿಯರ ವಿರುದ್ಧ ಈ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ 300/2004 ನೇದ್ದನ್ನು ದಾಖಲಿಸಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಹಾಜರಾಗಿ ವಾದಿಯರು ಮಾಲೀಕರು ಮತ್ತು ಕಬ್ಜಾದಾರರು ಅಲ್ಲ ಅಂತ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ರಾಜೇಸಾಬನ ವಿರುದ್ಧ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶಲಾಸಾಬನಿಗೆ ರಾಜೇಸಾಬ ಮತ್ತು 2 ನೇ ಪ್ರತಿವಾದಿ ಮಾತ್ರ ಮಕ್ಕಳು ಇರುತ್ತಾರೆ ಎಂದರೆ ನಿಜ. ಪಾಡೆಸಾಬ ತೀರಿಕೊಂಡ ನಂತರ ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹಿರಿಯರ ಆಸ್ತಿ ಎಂದರೆ ಸರಿಯಲ್ಲ. ನಾನು ಹಿಂದು, ವಾದಿಯು ಮುಸ್ಲಿಂ ಇರುತ್ತಾರೆ ಎಂದರೆ ಸರಿ. ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಒಟ್ಟು ಕುಟುಂಬದಲ್ಲಿ ಇರುತ್ತಾರೆ ಎಂದು ತೋರಿಸುವ ಮನೆ ನಂಬರ ನನಗೆ ಗೊತ್ತಿರುವುದಿಲ್ಲ.

3. ನನ್ನ ವಿರುದ್ದ ಗುಲ್ಬರ್ಗಾ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದೆ

ಎಂದರೆ ಸರಿ. ನನ್ನ ವಿರುದ್ದ ಕ್ರಿಮಿನಲ್ ಪ್ರಕರಣಗಳು ಇದ್ದವು ಎಂದರೆ ನಿಜ. ನಾನು ಗುಲ್ಬರ್ಗಾದಲ್ಲಿ 20 ವರ್ಷ ಇದ್ದೇನು. ನಾನು ಬೇರೆ-ಬೇರೆ ಕ್ರಿಮಿನಲ್ ಕೇಸುಗಳನ್ನು ದಾಖಲಿಸುವುದು, ಸಾಕ್ಷಿ ಹೇಳುವುದು ಇದೆ ನನ್ನ ವೃತ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಆಸ್ತಿ ಸರ್ವೆ ನಂ.247 ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದೊಂದಿಗೆ ನಾನು ಪಹಣಿಯನ್ನು ಕೊಟ್ಟಿಟುವುದಿಲ್ಲ. ನಾನು ಸುರಪೂರದಲ್ಲಿ ವಾಸವಾಗಿರುವುದಿಲ್ಲ, ಹೀಗೆ ಹೊಲ ಮನೆಗಳನ್ನು ಮಾರಿಕೊಂಡು ಗುಲ್ಬರ್ಗಾದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ರಾಜೇಸಾಬನಾಗಲಿ ಮತ್ತು ಆತನ ಹೆಂಡತಿ ಮಕ್ಕಳಾಗಲಿ ಎಂದೂ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿಯವರು ಎಂದು ಸಾಗುವಳಿ ಮಾಡಿಲ್ಲ ಮತ್ತು ಅವರು ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.